2) ಕೌಶಲ್ಯ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳ ಪ್ರಗತಿಯನ್ನು ನಿಯತಕಾಲಿಕವಾಗಿ ಪರಿಶೀಲನೆ ನಡೆಸುವುದು.

3) ಈ ಯೋಜನೆಯ ಅನುಷ್ಠಾನದ ಅವಧಿಯಲ್ಲಿ ಅವಶ್ಯಕಂಡ ಸೂಕ್ತ ಬದಲಾವಣೆಗಳನ್ನು ತರುವ ಬಗ್ಗೆ ನಿರ್ಧರಿಸುವುದು.

4) ಖಾಸಗಿ ಮತ್ತು ಸಾರ್ವಜನಿಕ ವಲಯಗಳ ಕಾರ್ಯಕ್ರಮಗಳನ್ನು ಒಂದುಗೂಡಿಸಿ ಸಹಭಾಗಿತ್ವದೊಂದಿಗೆ ಕಾರ್ಯ ನಿರ್ವಹಿಸುವಂತೆ ಆಯೋಜಿಸುವುದು.

5) ಈ ಮೇಲಿನ ಕಾರ್ಯಗಳನ್ನು ಅನುಷ್ಠಾನಗೊಳಿಸಲು/ ನಿರ್ವಹಿಸಲು ಆಯೋಗವು ಆಗಿಂದಾಗ್ಗೆ ಸಭೆ ನಡೆಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎ.ಎಸ್. ವಿಶ್ವೇಶ್ವರಯ್ಯ
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ,
(ಉದ್ಯೋಗ ಮತ್ತು ತರಬೇತಿ)

ಗಂಗಾ ಕಲ್ಯಾಣ ಯೋಜನೆ

898 (816) ಶ್ರೀ ನರಸಿಂಹ ಸ್ವಾಮಿ.ಜಿ (ದೊಡ್ಡಬಳ್ಳಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಂಗಾ ಕಲ್ಯಾಣ ಯೋಜನಾವತಿಯಿಂದ 2009–10ನೇ ಸಾಲಿನ ಫಲಾನುಭವಿಗಳ ಆಯ್ಕೆ ಮುಗಿದಿದ್ದು, ಇದನ್ನು ಆವಾಗ ಅನುಷ್ಠಾನ ಗೊಳಿಸಲಾಗುವುದು; ಅನುಷ್ಠಾನಗೊಳಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸರ್ಕಾರ ನಿಗದಿಪಡಿಸಿರುವ ಅಂದಾಜು ವೆಚ್ಚಕ್ಕೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೊಳವೆಬಾವಿ ಕೊರೆಯಲು ಸಾಧ್ಯವೆ;

ಇ) ಹಾಗಿದ್ದಲ್ಲಿ, ಸರ್ಕಾರ ನೀಡುತ್ತಿರುವ ಹಣ ಯೋಜನೆ ಪೂರ್ತಿಗೊಳಿಸಲು ಸಾಕಾಗುತ್ತಿದೆಯೇ; ಇಲ್ಲವಾದಲ್ಲಿ, ಪ್ರಾಂತ್ಯವಾರು

ಯೋಜನೆ ಅನುಷ್ಠಾನಗೊಳಿಸಲು ಸರ್ಕಾರ ಹಣ ನಿಗದಿ ಪಡಿಸಲು ಅವಕಾಶ ಕಲ್ಪಿಸಿಕೊಡಲು ಸರ್ಕಾರಕ್ಕಿರುವ ತೊಂದರೆ ಏನು;

ಈ) ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ವೈಯಕ್ತಿಕ ಕೊಳವೆ ಬಾವಿ ಪಡೆಯುವ ಫಲಾನುಭವಿಗೆ ಕೊಳವೆಬಾವಿ ಕೊರೆಸುವ ಅವಕಾಶ ಸರ್ಕಾರದಲ್ಲಿ ಇದೆಯೇ?

ಶ್ರೀ ಡಿ.ಸುಧಾಕರ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) ಕೆಲವು ಕಡೆ ಸಾಧ್ಯವಾಗುತ್ತಿಲ್ಲ.

ಇ) ಘಟಕ ವೆಚ್ಚದ ಮಿತಿಯನ್ನು ತೆಗೆದು ಹಾಕಲಾಗಿದೆ. ಅಂತರ್ಜಲ ಲಭ್ಯತೆ ಆಧಾರದ ಮೇಲೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ವೈಜ್ಞಾನಿಕವಾಗಿ ವಿಂಗಡಿಸಿದ ವಲಯಗಳಿಗನುಸಾರವಾಗಿ ಘಟಕ ವೆಚ್ಚ ಹೆಚ್ಚಿಸುವ ವಿಷಯ ಪರಿಶೀಲನೆಯಲ್ಲಿದೆ.

ಈ) ಇಲ್ಲ.

ಕ್ಯಾನ್ಸರ್, ಹೃದಯರೋಗ, ಬ್ರೈನ್‌ಟ್ಯೂಮರ್ ಮತ್ತು ಸುಟ್ಟ ಗಾಯಗಳ ರೋಗಿಗಳಿಗೆ ಉಚಿತ ಚಿಕಿತ್ಸೆ ಕಲ್ಪಿಸುವುದು.

899 (817) ಶ್ರೀ ನರಸಿಂಹಸ್ವಾಮಿ ಜೆ. (ದೊಡ್ಡಬಳ್ಳಾಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ವತಿಯಿಂದ ಬಡತನ ರೇಖೆಗಿಂತ ಕೆಳಗಿರುವ ಕೂಲಿ ಕಾರ್ಮಿಕರು ಹಾಗೂ ಬಡವರಿಗೆ ಸರ್ಕಾರದ ವತಿಯಿಂದ ಕ್ಯಾನ್ಸರ್, ಬ್ರೈನ್‌ಟ್ಯೂಮರ್, ಮೂತ್ರಪಿಂಡ ವೈಫಲ್ಯ ಹಾಗೂ ಸುಟ್ಟಗಾಯಗಳ ರೋಗಿಗಳಿಗೆ ಸಂಪೂರ್ಣ ಉಚಿತವಾಗಿ ಚಿಕಿತ್ಸೆ ನೀಡುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಆ) ಇದ್ದಲ್ಲಿ ಅನುಷ್ಠಾನಗೊಳಿಸಲು ಇರುವ ತೊಂದರೆಗಳೇನು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಗುಲ್ಬರ್ಗಾ ಕಂದಾಯ ವಿಭಾಗದ ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಯಾದಗೀರ್, ಬಳ್ಳಾರಿ ಈ 6 ಜಿಲ್ಲೆಗಳಲ್ಲಿ ಬಡತನ